■ ಹನಿ

# ಸಂಸಾರ ಜ್ವಾಲೆ

13 ಸಲ ರಾಷ್ಟ್ರೀಯ ಬ್ಯಾಡ್ಮಿಂಟನ್ ಪ್ರಶಸ್ತಿ ಗೆಲ್ಲುವುದೆಂದರೆ ಸುಲಭದ ಮಾತಲ್ಲ. ಅಷ್ಟೂ ವರ್ಷಗಳ ಕಾಲ 'ಫಾರ್ಮ್'ಅನ್ನು ಸ್ಥಿರವಾಗಿ ಕಾಪಾಡಿಕೊಳ್ಳುವುದೇ ದೊಡ್ಡ ಸವಾಲು. ವಯಸ್ಸು ಹೆಚ್ಚಾಗುತ್ತಿದ್ದಂತೆ, ಸಂಸಾರದ ನೊಗಕ್ಕೆ ಹೆಗಲು ಕೊಟ್ಟಂತೆ ಮನಸ್ಸಿನ ಒತ್ತಡಗಳೂ ಹೆಚ್ಚುತ್ತಲೇ ಹೋಗುತ್ತವೆ. ಆ ಒತ್ತಡ ಆಟದ ಮೇಲೆ ಪರಿಣಾಮ ಬೀರದಂತೆ ನೋಡಿಕೊಂಡು, ಆಟದಲ್ಲಿ ತಾದಾತ್ಮ್ಯ ಸಾಧಿಸುವುದೂ ದೊಡ್ಡ ಕಲೆ. ಆಟದ ಕುರಿತು ಅಗಾಧ ಮೋಹ; ಒಳಗೇ ಸದಾ ಉರಿಯುವ ಒಂದು ಜ್ವಾಲೆ– ಇಲ್ಲದಿದ್ದರೆ ಹೀಗೆ ಚಾಂಪಿಯನ್ ಆಗಲಾಗದು.

ಜ್ವಾಲಾ ಗುಟ್ಟಾ ಇಂತಹ ಸಾಧನೆಯನ್ನು ಮೆರೆದಿರುವ ಅಪರೂಪದ ಆಟಗಾರ್ತಿ. ಆದರೆ ಕಳೆದೊಂದು ವರ್ಷದಿಂದ ಆಕೆ ಸಂಸಾರದ ಜ್ವಾಲೆಯಲ್ಲಿ ಸಿಕ್ಕು ನಲುಗಿದ್ದಳು. ಗಂಡ ಚೇತನ್ ಆನಂದ್ ಕೂಡಾ ನಾಲ್ಕು ಸಲ ರಾಷ್ಟ್ರೀಯ ಚಾಂಪಿಯನ್ ಆಗಿರುವ ಆಟಗಾರ. ಆರು ವರ್ಷಗಳ ಹಿಂದೆ ಇದೇ ಜುಲೈನಲ್ಲಿ ಇಬ್ಬರೂ ಮದುವೆಯಾದಾಗ 'ಸ್ವರ್ಗಕ್ಕೆ ಕಿಚ್ಚು ಹಚ್ಚಿಂದ..' ಎಂಬಂತೆ ಓಡಾಡಿದ್ದರು. ಅದೂ ಪ್ರೇಮವಿವಾಹ. ಇಬ್ಬರೂ ಸ್ಫುರದ್ರೂಪಿಗಳು, ಪ್ರತಿಭಾವಂತರು. ಆದರೆ ಅದೇಕೋ ಸಂಸಾರ ಸರಿ ಹೋಗಲಿಲ್ಲ. ಆರು ತಿಂಗಳ ಹಿಂದೆ ವಿಚ್ಛೇದನ ಕೋರಿ ಕೋರ್ಟ್ ಮೆಟ್ಟಿಲು ಹತ್ತಿದ ಜೋಡಿಗೆ ಈಗ ಬಿಡುಗಡೆ ದೊರಕಿದೆ. ಇಬ್ಬರೂ ಈಗ ಸ್ವತಂತ್ರರು.

ಬಹುತೇಕ ಚಿತ್ರನಟಿಯರಿಗಿಂತಲೂ ಸುಂದರಿಯಾಗಿರುವ ಜ್ವಾಲಾ ಹುಟ್ಟಿದ್ದು ಮಹಾರಾಷ್ಟ್ರದ ವಾರ್ಧಾದಲ್ಲಿ. ತಂದೆ ತೆಲುಗು; ತಾಯಿ ಚೀನೀ. ತಾಯಿಯ ತಂದೆ ಚೀನೀಯರಾದರೂ ಮಹಾತ್ಮಾ ಗಾಂಧಿಯವರ ಪ್ರಭಾವಕ್ಕೆ ಒಳಗಾಗಿ ವಾರ್ಧಾ ಆಶ್ರಮ ಸೇರಿದವರು. ಅಲ್ಲೇ ಇದ್ದು ಗಾಂಧೀಜಿಯವರ ಆತ್ಮಕಥೆಯ ಸಹಿತ ಹಲವು ಪುಸ್ತಕಗಳನ್ನು ಚೀನೀ ಭಾಷೆಗೆ ಅನುವಾದಿಸಿದವರು. ಪ್ರತಿಭಾವಂತ ಕುಟುಂಬದ ಕುಡಿ ಜ್ವಾಲಾ. ಈ ಸುಂದರಿಯ ಸಂಸಾರ ಹದಗೆಡಲು ಮಾಜಿ ಕ್ರಿಕೆಟಿಗ ಮೊಹಮ್ಮದ್ ಅಜರುದ್ದೀನ್ ಜತೆಗಿನ 'ಸ್ನೇಹ' ಕಾರಣ ಎನ್ನುವವರಿದ್ದಾರೆ. ಇಬ್ಬರಿಗೂ ಸಂಬಂಧ ಇದೆ ಎಂದು ಸುದ್ದಿ ಹಬ್ಬಿಸಿದವರೇ ಬಳಿಕ, 'ಜ್ವಾಲಾಗೆ ಅಜರುದ್ದೀನ್ ಮಗನ ಜತೆಗೆ ಸಂಬಂಧವಿದೆ' ಎಂದೂ ಸುದ್ದಿ ಹಬ್ಬಿಸಿದ್ದರು! ಜ್ವಾಲಾ ಈ ಸುದ್ದಿಯನ್ನು ಖಂಡತುಂಡವಾಗಿ ನಿರಾಕರಿಸುತ್ತಲೇ ಬಂದಿದ್ದಾಳೆ. ಇದೆಲ್ಲ ಬ್ಯಾಡ್ಮಿಂಟನ್ ಅಸೋಸಿಯೇಷನ್ ಅಧ್ಯಕ್ಷ ವಿ.ಕೆ.ವರ್ಮಾ ಪಿತೂರಿ ಎನ್ನುವುದು ಅಜರುದ್ದೀನ್ ಆರೋಪ. ಅಧ್ಯಕ್ಷ ಹುದ್ದೆಗೆ ಅಜರ್ ಸ್ಪರ್ಧೆ ತಯಾರಿ ನಡೆಸಿರುವುದೇ ಪಿತೂರಿಗೆ ಕಾರಣವಂತೆ.

'ಇನ್ನು ನನ್ನ ಗಮನ ಬ್ಯಾಡ್ಮಿಂಟನ್ ಕಡೆಗೆ ಮಾತ್ರ. ಇನ್ನೊಂದು ಮದುವೆ ಆಗುವುದಿದ್ದರೂ ಕ್ರೀಡೆಯಿಂದ ನಿವೃತ್ತಿ ಆದ ಬಳಿಕ' ಎಂದು ವಿಚ್ಛೇದನದ ಬಳಿಕ ಜ್ವಾಲಾ ಗಟ್ಟಿಧ್ವನಿಯಲ್ಲಿ ಹೇಳಿದ್ದಾಳೆ. ಈಕೆ ಭಾರತ ಈವರೆಗೆ ಕಂಡ ಅತ್ಯುತ್ತಮ ಡಬಲ್ಸ್ ಆಟಗಾರ್ತಿಯೂ ಹೌದು. ಮೊದಲು ಶೃತಿ ಕುರಿಯನ್ ಜತೆಗೆ ಮತ್ತು ಈಗ ಕರ್ನಾಟಕದ ಅಶ್ವಿನಿ ಪೊನ್ನಪ್ಪ ಜತೆಗೆ ಡಬಲ್ಸ್ ಜೋಡಿಯಾಗಿರುವ ಜ್ವಾಲಾ ಕಾಮನ್‌ವೆಲ್ತ್ ಗೇಮ್ಸ್‌ನಲ್ಲಿ ಡಬಲ್ಸ್ ಚಿನ್ನ ಗೆದ್ದವಳು. ಆ ಗೆಲುವಿನ ಕೊಂಡಿ ಮುಂದುವರಿಯಲಿ.



# ಜಗದೇಕ ಶ್ರೀಮಂತ



ಕಾರ್ಲೋಸ್ ಸ್ಲಿಮ್ ಹೆಲು ಎನ್ನುವ ಹೆಸರು ಕೇಳದ ಶ್ರೀಮಂತರಿಲ್ಲ. ಮೆಕ್ಸಿಕೋದ ಈ ಉದ್ಯಮಿ 'ಜಗತ್ತಿನಲ್ಲೇ ನಂಬರ್ ಒನ್ ಶ್ರೀಮಂತ' ಎಂದು ಸತತ ಎರಡನೇ ವರ್ಷ ಆಯ್ಕೆಯಾಗಿದ್ದಾನೆ. ಮೈಕ್ರೊಸಾಫ್ಟ್‌ನ ಬಿಲ್ ಗೇಟ್ಸ್ ಮತ್ತು ವಾರೆನ್ ಬಫೆಟ್ ಈತನ ನಂತರದ ಸ್ಥಾನದಲ್ಲಿದ್ದಾರೆ. ಕಾರ್ಲೋಸ್‌ನ (ಬರ್ತ್‌ಡೇ 28/1/1940) ಸದ್ಯದ ಆಸ್ತಿಯ ಒಟ್ಟು ಮೊತ್ತ 74 ಶತಕೋಟಿ ಡಾಲರ್!

ಕಾರ್ಲೋಸ್ ಸ್ಲಿಮ್ ಯಶಸ್ವಿ ಉದ್ಯಮಿಯಾಗಲು ಹೂಡಿಕೆಯ ಕುರಿತ ಆತನ ಜಾಣತನವೇ ಕಾರಣ. ಟೆಲ್ಮೆಕ್ಸ್ ಮತ್ತು ಅಮೆರಿಕ ಮೊವಿಲ್ ಎಂಬ ದೈತ್ಯ ಟೆಲಿಕಾಂ ಕಂಪೆನಿಗಳ ಚೇರ್‌ಮನ್ ಮತ್ತು ಸಿಇಓ ಆಗಿರುವ ಕಾರ್ಲೋಸ್, ಹತ್ತಾರು ಮೆಕ್ಸಿಕನ್ ಕಂಪೆನಿಗಳಲ್ಲಿ ಅಗಾಧ ಹಣ ಹೂಡಿದ್ದಾನೆ. ಮೊವಿಲ್ – ಲ್ಯಾಟಿನ್ ಅಮೆರಿಕಾದ ಅತಿದೊಡ್ಡ ಟೆಲಿಕಾಂ ಕಂಪೆನಿ. ಅದೊಂದರಿಂದಲೇ ಈತನಿಗೆ ವರ್ಷಕ್ಕೆ 49 ಶತಕೋಟಿ ಡಾಲರ್ ಆದಾಯ ಬರುತ್ತಿದೆಯಂತೆ!

ಲೆಬನಾನ್ ಮೂಲದ ಈತನ ತಂದೆ–ತಾಯಿ ಮೆಕ್ಸಿಕೋಗೆ ವಲಸೆ ಬಂದವರು. ತಂದೆ ಕಷ್ಟಪಟ್ಟು ಸಣ್ಣ ಉದ್ಯಮವೊಂದನ್ನು ಸ್ಥಾಪಿಸಿದ. ಮಗ ಬಾಲ್ಯದಲ್ಲೇ ಹೂಡಿಕೆಯ ಬಗ್ಗೆ ಆಸಕ್ತಿ ಬೆಳೆಸಿಕೊಂಡ. 12ರ ಹರೆಯದಲ್ಲೇ ಕಾರ್ಲೋಸ್ ಮೆಕ್ಸಿಕನ್ ಬ್ಯಾಂಕ್ ಒಂದರ ಷೇರು ಖರೀದಿಸಿದ್ದ. ಎಂಜಿನಿಯರಿಂಗ್ ಕಲಿಯುತ್ತಿರುವಾಗಲೇ ಮಕ್ಕಳಿಗೆ ಅಂಕಗಣಿತದ ಪಾಠ ಹೇಳಿ ದುಡಿಯುತ್ತಿದ್ದ ಕಾರ್ಲೋಸ್, ಇವತ್ತು ತಂಬಾಕು, ಹೋಟೆಲ್, ಆಹಾರ ಸಂಸ್ಕರಣೆ, ಟೈರ್, ಅಲ್ಯೂಮಿನಿಯಂ, ರಿಯಲ್ ಎಸ್ಟೇಟ್, ಗಣಿಗಾರಿಕೆ– ಹೀಗೆ ಎಲ್ಲ ಉದ್ಯಮಗಳಲ್ಲೂ ಹಣ ಹೂಡಿದ್ದಾನೆ. ಸಿಗಿಟಮ್, ಬಿಮೆಕ್ಸ್ ಹೋಟೆಲ್, ಜನರಲ್ ಟೈರ್ಸ್, ರೇನಾಲ್ಡ್ಸ್ ಕಂಪೆನಿಗಳ ಒಡೆಯನೀತ. ಆಲ್ಟ್ರಿಯಾ (ಹಿಂದೆ ಫಿಲಿಪ್ ಮೋರಿಸ್), ಅಲ್ಕಾಟೆಲ್, ಎಸ್‌ಬಿಸಿ ಕಮ್ಯುನಿಕೇಷನ್ಸ್– ಹೀಗೆ ಹಲವು ದೊಡ್ಡ ಕಂಪೆನಿಗಳ ನಿರ್ದೇಶಕ. ಆ್ಯಪಲ್ ಕಂಪೆನಿಯಲ್ಲೂ ಶೇಕಡಾ 3ರಷ್ಟು ಷೇರು ಹೊಂದಿದ್ದಾನೆ. ಫಾರ್ಮುಲಾ ರೇಸ್ ತಂಡವೊಂದರ ಪ್ರಾಯೋಜಕ. ಈತನ ಶ್ರೀಮಂತಿಕೆಗೆ ದಾರಿಗಳು ನೂರೆಂಟು.

ಪತ್ನಿ ಸಮ್ಮಾ ಡೊಮಿಟ್ ತೀರಿಕೊಂಡು 12 ವರ್ಷಗಳಾಗಿವೆ. 72ರ ಈ ತಾತನಿಗೆ 6 ಮಕ್ಕಳು. ಅಮೆರಿಕದ ಪ್ರಜೆಯಲ್ಲದವನೊಬ್ಬ ಹೀಗೆ ಜಗತ್ತಿನ ನಂಬರ್ ಒನ್ ಶ್ರೀಮಂತನಾಗಿರುವುದು ಇದೇ ಮೊದಲಂತೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65